**ಕರ್ನಾಟಕ ಸರ್ಕಾರ**

**(ನೋಂದಣಿ ಮತ್ತು ಮುದ್ರಾಂಕ ಇಲಾಖೆ)**

**ಸಂಖ್ಯೆ:**Comp/ 09/2007-08

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಶಿಂಷಾ ಭವನ, ನಂ.720, 8ನೇ ಬ್ಲಾಕ್,
46ನೇ ಅಡ್ಡ ರಸ್ತೆ, ಸಂಗಮ್ ಸರ್ಕಲ್,
ಜಯನಗರ, ಬೆಂಗಳೂರು-82.
**ದಿನಾಂಕ**: 05-02-2011.

**ಸುತ್ತೋಲೆ ಸಂಖ್ಯೆ:19**

**ವಿಷಯ:** ವಿದ್ಯುತ್ ಶಾರ್ಟ್ ಸರ್ಕೀಟ್/ಬೆಂಕಿ ಆಕಸ್ಮಿಕ ಇತ್ಯಾಧಿ ದುರ್ಘಟನೆಗಳ ಸಂಬಂಧವಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಕುರಿತು.

**ಉಲ್ಲೇಖ:** 1) ಈ ಕಛೇರಿಯ ಜ್ಞಾಪನ ಸಂಖ್ಯೆ: Comp/06/2003-04 ದಿನಾಂಕ: 17-11-2009
2) ಈ ಕಛೇರಿಯ ಜ್ಞಾಪನ ಸಂಖ್ಯೆ: Comp/06/2003-04 ದಿನಾಂಕ: 09-08-2010.
3) ಈ ಕಛೇರಿ ಸುತ್ತೋಲೆ ಸಂಖ್ಯೆ: Comp/09/2007-08 ದಿನಾಂಕ: 09-09-2008.

********

ಕಛೇರಿಯ ಕಡತ/ಉಪಕರಣಗಳಿಗೆ ವಿದ್ಯುತ್ ಶಾರ್ಟ ಸರ್ಕೀಟ್‌ನಿಂದ ಬೆಂಕಿ ಹತ್ತಿ ನಷ್ಟವಾಗದಿರಲೆಂಬ ಉದ್ದೇಶದಿಂದ Computer ಗೆ ವಿದ್ಯುತ್ ಜೋಡಿಸುವ Switch ಹಾಗೂ ಮುಖ್ಯ switch ಗಳನ್ನು ಕಛೇರಿ ಸಮಯದ ನಂತರ ಬಾಗಿಲು ಹಾಕುವ ಪೂರ್ವದಲ್ಲಿ ಕಡ್ಡಾಯವಾಗಿ ಬಂದ್ ಮಾಡಲು ಉಲ್ಲೇಖ(3) ರ ಸುತ್ತೋಲೆಯನ್ವಯ (Switch off) ಸೂಚಿಸಲಾಗಿರುತ್ತದೆ.

ಪ್ರಸ್ತುತ ರಾಜ್ಯದ ಎಲ್ಲಾ ಉಪ-ನೋಂದಣಾಧಿಕಾರಿ/ಜಿಲ್ಲಾ ನೋಂದಣಾಧಿಕಾರಿ ಕಛೇರಿಗಳಿಗೆ ಕರ್ನಾಟಕ ರಾಜ್ಯ ವ್ಯಾಪ್ತಿ ಸಂಪರ್ಕ ಜಾಲ (KSWAN) ನೀಡಲಾಗಿರುತ್ತದೆ. KSWAN ಸಂಪರ್ಕಜಾಲವು ಸಮರ್ಪಕವಾಗಿ ಕಾರ್ಯನಿರ್ವಹಿಸಲು KSWAN ಸಂಪರ್ಕ ಕಲ್ಪಿಸುವ Router switch ಹಾಗೂ ತತ್ಸಂಬಂಧಿತ ಉಪಕರಣಗಳಿಗೆ ಸದಾ ಕಾಲ ವಿದ್ಯುತ್ ಚಕ್ತಿ ಪೂರೈಸುವುದು ಅತ್ಯವಶ್ಯವಿರುತ್ತದೆ. ಈ ವಿಷಯವಾಗಿ ಉಲ್ಲೇಖ(1) ಹಾಗೂ (2)ರ ಜ್ಞಾಪನ ಪತ್ರಗಳನ್ವಯ KSWAN ಉಪಕರಣಗಳಿಗೆ ವಿದ್ಯುತ್‌ಚಕ್ತಿ ಪೂರೈಕೆಯನ್ನು ಸದಾ ಕಾಲ ಚಾಲ್ತಿಯಲ್ಲಿಡಲು ಸೂಚಿಸಲಾಗಿರುತ್ತದೆ. ಇದಲ್ಲದೇ ಸದರಿ KSWAN ಉಪಕರಣಗಳಿಗೆ UPS ಜೋಡಣೆ ಮಾಡಿ UPS ಅನ್ನು ಸಹ ಸದಾಕಾಲ ಚಾಲ್ತಿಸ್ಥಿತಿಯಲ್ಲಿಡಲು ಸೂಚಿಸಲಾಗಿರುತ್ತದೆ.

KSWAN ಉಪಕರಣಗಳಿಗೆ ಸದಾಕಾಲ ವಿದ್ಯುಚ್ಛಕ್ತಿ ಪೂರೈಸುವುದಕ್ಕಾಗಿ ಉಲ್ಲೇಖ(3) ರ ಸುತ್ತೋಲೆಯನ್ನು ಭಾಗಶ: ಮಾರ್ಪಡಿಸಿ ಈ ಕೆಳಕಂಡಂತೆ ಕ್ರಮಕ್ಕೈಕೊಳ್ಳಲು ಸೂಚಿಸಲಾಗಿದೆ.

KSWAN ಉಪಕರಣಗಳಿಗೆ ಸದಾಕಾಲ ವಿದ್ಯುತ್ (ದಿನದ 24 ಗಂಟೆ) ಪೂರೈಸದಿದ್ದಲ್ಲಿ ಹಾಗೂ ವಿದ್ಯುತ್ ಸ್ವಿಚ್‌ಗಳನ್ನು ಆಗಾಗ್ಗೆ Switch on ಮತ್ತು Switch off ಮಾಡುವುದರಿಂದ ಹೆಚ್ಚಿನ ಬೆಲೆಯ KSWAN ಉಪಕರಣಗಳು ಹಾಳಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ KSWAN ಉಪಕರಣಗಳಾದ Router, Modem ಹಾಗೂ KSWAN Switch ಗಳಿಗೆ UPS ಮೂಲಕ ವಿದ್ಯುತ್‌ನ್ನು ಸದಾಕಾಲ ಪೂರೈಸುವುದು ಅತ್ಯವಶ್ಯವಿರುತ್ತದೆ. KSWAN ಉಪಕರಣಗಳಿಗೆ ಸದಾಕಾಲ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಅವುಗಳಿಗೆ ವಿದ್ಯುತ್ ಸರಬರಾಜು ಮಾಡುವ ವಿದ್ಯುತ್ Switch ಗಳನ್ನು ಹಾಗೂ UPSಗೆ ವಿದ್ಯುತ್ ಸರಬರಾಜು ಮಾಡುವ ವಿದ್ಯುತ್ Switch ಗಳನ್ನು ಸದಾಕಾಲ (ದಿನದ 24 ಗಂಟೆ) Switch on ಮಾಡಿ ಇಟ್ಟಿರಲು ಸೂಚಿಸಿದೆ.

ಇನ್ನುಳಿದಂತೆ ಇತರ ವಿದ್ಯುತ್ Switch ಗಳನ್ನು ಕಛೇರಿಯ ವೇಳೆಯ ನಂತರ Switch off ಮಾಡಲು ಸೂಚಿಸಿದೆ. ಉಲ್ಲೇಖ(3)ರ ಸುತ್ತೋಲೆಯ ಇತರೆ ಅಂಶಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳು ಇರುವುದಿಲ್ಲ. ಅವುಗಳನ್ನು ತಪ್ಪದೆ ಪಾಲಿಸಿಕೊಂಡು ಹೋಗಲು ಸೂಚಿಸಿದೆ.

KSWAN ಉಪಕರಣಗಳಿಗೆ ವಿದ್ಯುತ್ Switch ನ್ನು ಬಂದ್ ಮಾಡುವ (Switch off) ಜಿಲ್ಲಾ ನೋಂದಣಾಧಿಕಾರಿ ಮತ್ತು ಉಪ-ನೋಂದಣಾಧಿಕಾರಿ ಹಾಗೂ ಅವರ ಸಿಬ್ಬಂಧಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ನೋಂದಣಿ ~~ಮಹಾ~~ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ. - ಜಿಲ್ಲಾ ನೋಂದಣಾಧಿಕಾರಿಗಳ ಮುಖಾಂತರ.
3. ಸಂಚಾಲಕರು ಕರ್ನಾಟಕ ರಾಜ್ಯ ಪತ್ರ - ಈ ಸುತ್ತೋಲೆಯನ್ನು ಕರ್ನಾಟಕ ರಾಜ್ಯ ಪತ್ರದ ಮುಂದಿನ ಆವೃತ್ತಿಯಲ್ಲಿ ಪ್ರಕಟಪಡಿಸಲು ಹಾಗೂ ಅದರ 500 ಪ್ರತಿಗಳನ್ನು ಈ ಕಛೇರಿಗೆ ಕಳಿಸಲು ಕೋರಿದೆ.